DAY — 08 SEAT NUMBER | | | | | | |

2025	II	20	1500	J-309	(K)

POLITICAL SCIENCE (42)

Time : 3 Hrs. (7 Pages) Max. Marks : 80

ಸೂಚನೆ : (1) ಎಲ್ಲ ಕೃತಿ / ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯವಾಗಿದೆ.

(2) ಬಲಗಡೆಯ ಅಂಕಿಗಳು ಪ್ರಶ್ನೆಯ / ಕೃತಿಯ (ಪೂರ್ಣ) ಅಂಕಗಳನ್ನು ತೋರಿಸುತ್ತವೆ.

(3) ಪ್ರಶ್ನೆ 2 (ಅ) ಇದರಲ್ಲಿಯ ಸಂಕಲ್ಪನಾ ಚಿತ್ರವನ್ನು ಅದೇ ಪದ್ಧತಿಯಲ್ಲಿ ಉತ್ತರಪತ್ರಿಕೆಯಲ್ಲಿ ತಯಾರಿಸುವುದು ಅವಶ್ಯವಾಗಿದೆ.

(4) ಪ್ರತಿಯೊಂದು ಹೊಸ ಪ್ರಶ್ನೆಯ ಉತ್ತರದ ಪ್ರಾರಂಭವನ್ನು ಹೊಸ ಪುಟದ ಮೇಲೆ ಮಾಡಬೇಕು.

ಪ್ರ.1. (ಅ) ಕಂಸಿನಲ್ಲಿಯ ಯೋಗ್ಯ ಪರ್ಯಾಯ ಆಯ್ಕೆ ಮಾಡಿ ವಿಧಾನ ಪೂರ್ಣಗೊಳಿಸಿರಿ : **(5) [20]**

(1) ಜಾಗತಿಕ ವ್ಯಾಪಾರ ಸಂಘಟನೆಯ (W.T.O.) ಸ್ಥಾಪನೆ ..... ರಲ್ಲಿ ಆಯಿತು.

(1975, 1985, 1995, 2005)

(2) 1960 ರ ದಶಕದಲ್ಲಿ ಭಾರತದ ಕೃಷಿ ಕ್ಷೇತ್ರದಲ್ಲಿ..... ಈ ಕ್ರಾಂತಿಯಾಯಿತು.

(ಶ್ವೇತ, ನೀಲಿ, ಹಸಿರು, ಔದ್ಯೋಗಿಕ)

(3) ರಾಷ್ಟ್ರವಾದ ಇದು ..... ಅಸ್ಮಿತೆ ನಿರ್ಮಾಣವಾಗುವ ಭಾವನೆಯಾಗಿದೆ.

(ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ)

(4) ಲೋಕಪಾಲ ಈ ಸಂಕಲ್ಪನೆ ..... ಈ ದೇಶದ ಕಡೆಯಿಂದ ತೆಗೆದುಕೊಳ್ಳಲಾಗಿದೆ.

(ಅಮೇರಿಕಾ, ಸ್ವಿಡನ್, ಇಂಗ್ಲಂಡ, ಕೆನಡಾ)

(5) ಕ್ರಿ.ಶ. 1972 ರಲ್ಲಿ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ..... ಒಪ್ಪಂದವಾಯಿತು.

(ಲಾಹೋರ, ಸಿಮ್ಲಾ, ತಾಸ್ಕಂದ, ಪಂಚಶೀಲ)

(ಬ) ಕೆಳಗಿನ ಪ್ರತಿಯೊಂದು ಗುಂಪಿನಲ್ಲಿಯ ತಪ್ಪು ಜೋಡಿಯನ್ನು ತಿದ್ದುಪಡೆ ಮಾಡಿ ಪುನ ಃ ಬರೆಯಿರಿ : (3)

(1) (ಅ) ಪಂಡಿತ ಜವಾಹರಲಾಲ ನೆಹರು — Discovery of India

(ಬ) ತಮಿಳ ಜನರ ಹಕ್ಕುಗಳಿಗಾಗಿ ಹೋರಾಟ — SAARC

(ಕ) ಅಮೇರಿಕಾ — Melting Pot

(2) (ಅ) ಮಹಾರಾಷ್ಟ್ರ ಲೋಕಾಯುಕ್ತ ಸಂಸ್ಥೆ — **1972**

(ಬ) ಮಾಹಿತಿಯ ಅಧಿಕಾರದ ಕಾಯ್ದೆ — **2008**

(ಕ) ಗ್ರಾಹಕ ರಕ್ಷಣಾ ಕಾಯ್ದೆ — **1986**

(3) (ಅ) NATO — ಯುರೋಪ

(ಬ) CENTO — ಪಶ್ಚಿಮ ಏಶಿಯಾ

(ಕ) SEATO — ಆಫ್ರಿಕಾ

(ಕ) ಕೆಳಗಿನ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಿಧಾನ ಪೂರ್ಣಗೊಳಿಸಿರಿ : (4)

(1) ಮಾಸ್ಟ್ರಿಕ್ತ ಒಪ್ಪಂದದ ಸಂದರ್ಭ .....

(ಅ) ಯುರೋಪಿಯನ್ ಸಂಘ

(ಬ) BRICS ದ ಸ್ಥಾಪನೆ

(ಕ) ಸಾರ್ಕ ಸಂಘಟನೆ

(2) ಸಾಮ್ಯವಾದಿ ಮಾರುಕಟ್ಟೆಯ ಅರ್ಥವ್ಯವಸ್ಥೆ ಯ ಸಂಕಲ್ಪನೆಯನ್ನು ಈ ದೇಶದ ಸಂದರ್ಭದಲ್ಲಿ ಬಳಸಲಾಗುತ್ತದೆ.....

(ಅ) ಭಾರತ

(ಬ) ಚೀನ

(ಕ) ಅಮೇರಿಕಾ

(3) ಇಂದು ಭಾರತದ ಲಿಂಗಭಾವ ಸಂಬಂಧಿತ ದೃಷ್ಟಿಕೋನವು ಇದರ ಮೇಲೆ ಗಮನ ಕೇಂದ್ರಿಕರಿಸುತ್ತದೆ .....

(ಅ) ಶಿಕ್ಷಣ

(ಬ) ಮಹಿಳೆಯರ ಸಬಲೀಕರಣ

(ಕ) ವಿಕಾಸ

(4) ಚಾರೂ ಮುಜುಮದಾರ ಇವರಿಗೆ ಸಂಬಂಧಿಸಿರುವುದು .....

(ಅ) ನಕ್ಸಲವಾದಿ ಚಳುವಳಿ

(ಬ) ಹಿಜಬುಲ್ ಮುಜಾಹಿದ್ದೀನ

(ಕ) ಆಸಾಮ ತೈಲಬಂಧನ

(ಡ) ಕೆಳಗಿನ ವಿಧಾನಗಳಿಗೆ ಯೋಗ್ಯವಾದ ಸಂಕಲ್ಪನೆ ಬರೆಯಿರಿ : (4)

(1) ಭಾರತ ಸರಕಾರದ ವಿಚಾರಗುಂಪು ಎಂದು ಕಾರ್ಯ ಮಾಡುವ ಮತ್ತು ಸರಕಾರಕ್ಕೆ ಮಾರ್ಗದರ್ಶನ ಹಾಗೂ ಧೋರಣಾತ್ಮಕ ಸಲಹೆಗಳನ್ನು ಕೊಡುವ ಆಯೋಗ .....

(2) ಸಮಾಜದಲ್ಲಿ ಭಯ ಹುಟ್ಟಿಸುವ ಸಲುವಾಗಿ ಬಳಸಲಾದ ಹಿಂಸಾಚಾರ .....

(3) ಜನರು ರಾಜ್ಯದ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.....

(4) ಎರಡನೆ ಮಹಾಯುದ್ಧದ ನಂತರ ಅಮೇರಿಕಾ ಮತ್ತು ಸೊವ್ಹಿಯತ್ ರಶಿಯಾ ಇವುಗಳಲ್ಲಿಯ ಸಂಘರ್ಷ .....

(ಇ) ಗುಂಪಿನಲ್ಲಿ ಸೇರ್ಪಡೆಯಾಗಲಾರದ ಶಬ್ದವನ್ನು ಗುರುತಿಸಿ ಬರೆಯಿರಿ : (4)

(1) BIMSTEC ದ ಸದಸ್ಯ - ಭಾರತ, ಭೂತಾನ, ನೇಪಾಳ, ಅಮೇರಿಕಾ

(2) ಫೆಸಬುಕ್ , ಇನ್‌ಸ್ಟಾಗ್ರಾಮ, ವ್ಹಾಟ್ಸಪ್, ಇಂಟರನೇಟ್

(3) ಹವಾಮಾನದಲ್ಲಿ ಬದಲಾವಣೆ, ಮಾಲಿನ್ಯ, ಅರಣ್ಯ ಕಡಿಯುವುದು, ಬಡತನ

(4) ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪೌರಸಂಸ್ಥೆ

ಪ್ರ.2. (ಅ) ಕೆಳಗಿನ ಸಂಕಲ್ಪನಾ ಚಿತ್ರವನ್ನು ಪೂರ್ಣಗೊಳಿಸಿರಿ : (4) **[9]**



(ಬ) ಕೆಳಗಿನ ನಕಾಶೆಯನ್ನು ನಿರೀಕ್ಷಣೆ ಮಾಡಿ ಅದರ ಮುಂದಿನ ಪ್ರಶ್ನೆಗೆ ಉತ್ತರಿಸಿರಿ : (5)



(1) ಸೋವ್ಹಿಯತ್ ರಶಿಯಾದ ವಿಭಜನೆಯ ನಂತರ ಉದಯವಾಗಿರುವ ಬೇಕಾದ ಐದು ದೇಶಗಳನ್ನು ಹೆಸರಿಸಿರಿ.

ಪ್ರ.3. ಕೆಳಗಿನ ವಿಧಾನಗಳು ಸರಿ ಅಥವಾ ತಪ್ಪು ಎಂಬುದನ್ನು ಸಕಾರಣ ಬರೆಯಿರಿ

(ಬೇಕಾದ 5ಕ್ಕೆ) : **[10]**

(1) ಜಾಗತೀಕರಣದಲ್ಲಿ ಸರಕಾರೇತರ (ಖಾಸಗಿ) ಸಂಸ್ಥೆಗಳ ಮಹತ್ವ ಕಡಿಮೆಯಾಗಿದೆ.

(2) ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಾಲಯ ಯಾವುದೇ ಒಂದು ರಾಷ್ಟ್ರದಲ್ಲಿ ಇರುವುದಿಲ್ಲ.

(3) ರಾಷ್ಟ್ರೀಯ ಮಹಿಳಾ ಆಯೋಗದ ಸ್ಥಾಪನೆಯನ್ನು ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಮಾಡಲಾಯಿತು.

(4) 1986ರಲ್ಲಿ ಸಂಯುಕ್ತ ರಾಷ್ಟ್ರ ಸಂಘವು ಮಹಿಳಾ ದಶಕವನ್ನು ಪ್ರಾರಂಭಿಸಿತು.

(5) ಭಾರತೀಯ ಸ್ವಾತಂತ್ರ್ಯ ಚಳುವಳಿಯು ರಾಷ್ಟ್ರೀಯ ಏಕಾತ್ಮತೆಗೆ ಪೋಷಕವಾಯಿತು.

(6) 1980ರ ದಶಕವನ್ನು ಮಾನವತಾವಾದಿ ಹಸ್ತಕ್ಷೇಪದ ಸುವರ್ಣಕಾಲ ಎನ್ನಬಹುದು.

(7) ಸುಶಾಸನದಲ್ಲಿ ನೈಸರ್ಗಿಕ ಸಂಪನ್ಮೂಲವನ್ನು ಕುಶಲತೆಯಿಂದ ಉಪಯೋಗ ಮಾಡಲಾಗುತ್ತದೆ.

ಪ್ರ.4. ಕೆಳಗಿನ ವಿಧಾನಗಳ ಸಹಸಂಬಂಧ ಸ್ಪಷ್ಟಪಡಿಸಿರಿ (ಬೇಕಾದ 3 ಕ್ಕೆ) : **[9]**

(1) ಶೀತಲ ಯುದ್ಧದ ಕೊನೆ - ಹೊಸ ರಾಷ್ಟ್ರಗಳ ಉದಯ

(2) ಜಾಗತೀಕರಣ - ಸಂಸ್ಕೃತಿ

(3) ಬಡತನ - ವಿಕಾಸ

(4) ಜಮ್ಮು ಕಾಶ್ಮೀರ - ಗಡಿ ಆಚೆಗಿನ ಭಯೋತ್ಪಾದನೆ

(5) ಭಾರತ - ಅಲಿಪ್ತವಾದ

ಪ್ರ.5. ಈ ಮುಂದಿನ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು 25 ರಿಂದ 30 ಶಬ್ದಗಳಲ್ಲಿ ಬರೆಯಿರಿ (ಬೇಕಾದ 3ಕ್ಕೆ) : **[12]**

(1) ಮಾನವ ಜೀವನದ ಮೇಲೆ ತಂತ್ರಜ್ಞಾನ ಕ್ಷೇತ್ರದಲ್ಲಿಯ ಪ್ರಗತಿಯ ಪರಿಣಾಮ ಕುರಿತು ನಿಮ್ಮ ಅಭಿಪ್ರಾಯ ತಿಳಿಸಿರಿ.

(2) ಪರಿಸರ ಸಂರಕ್ಷಣೆಯು ಇಂದಿನ ಅವಶ್ಯಕತೆಯಾಗಿದೆ.

(3) ಭಯೋತ್ಪಾದನೆಯು ಜಾಗತಿಕ ಸಮಸ್ಯೆಯಾಗಿದೆ.

(4) ಈ-ಪ್ರಶಾಸನವು ಆಡಳಿತವನ್ನು ಜನತೆಯ ಹತ್ತಿರ ತಂದಿದೆ.

(5) ಭಾರತವು ಉದಯೋನ್ಮುಖ ಶಕ್ತಿಯಾಗಿದೆ.

ಪ್ರ.6. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ 80 ರಿಂದ 100 ಶಬ್ದಗಳಲ್ಲಿ ಉತ್ತರಿಸಿರಿ (ಬೇಕಾದ 2ಕ್ಕೆ) : **[10]**

(1) ಯುರೋಪಿಯನ್ ಮಹಾಸಂಘದ ಕಾರ್ಯ ಹೇಗೆ ನಡೆಯುತ್ತದೆ ?

(2) ರಾಜಕೀಯ ಕ್ಷೇತ್ರದ ಮೇಲೆ ಜಾಗತೀಕರಣದಿಂದ ಆಗಿರುವ ಪರಿಣಾಮ ಸ್ಪಷ್ಟ ಮಾಡಿರಿ.

(3) ಭಾರತದಲ್ಲಿಯ ಮಹಿಳೆಯರ ಸಮಸ್ಯೆಗಳನ್ನು ಸ್ಪಷ್ಟಪಡಿಸಿರಿ.

(4) ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವ ಸಲುವಾಗಿ ರಾಜ್ಯದ ಪಾತ್ರವನ್ನು ಸ್ಪಷ್ಟಪಡಿಸಿರಿ.

ಪ್ರ.7. ಕೆಳಗಿನ ಬೇಕಾದ <u>ಒಂದು</u> ಪ್ರಶ್ನೆಗೆ ಅಂಶಗಳಿಗೆ ಅನುಸಾರವಾಗಿ 150 ರಿಂದ 200 ಶಬ್ದಗಳಲ್ಲಿ ಉತ್ತರಿಸಿರಿ : **[10]**

(1) ಸುಶಾಸನದ ಕೆಳಗಿನ ಮೌಲ್ಯಗಳನ್ನು ಸ್ಪಷ್ಟಪಡಿಸಿರಿ :

(ಅ) ಸಹಭಾಗಾತ್ಮಕ

(ಬ) ಪಾರದರ್ಶಕತೆ

(ಕ) ಕಾನೂನಿನ ರಾಜ್ಯ

(ಡ) ಒಪ್ಪಿಗೆ ಆಧಾರಿತ

(ಇ) ಉತ್ತರದಾಯಿತ್ವ

(2) ಭಾರತದ ಪರರಾಷ್ಟ್ರ ಧೋರಣೆಯನ್ನು ಪ್ರಭಾವಿತಗೊಳಿಸುವ ಘಟಕಗಳನ್ನು ಸ್ಪಷ್ಟಪಡಿಸಿರಿ :

(ಅ) ಭೌಗೋಲಿಕ ಘಟಕ

(ಬ) ಐತಿಹಾಸಿಕ ಘಟಕ

(ಕ) ಆರ್ಥಿಕ ಘಟಕ

(ಡ) ರಾಜಕೀಯ ಘಟಕ

(ಇ) ಅಂತರರಾಷ್ಟ್ರೀಯ ವ್ಯವಸ್ಥೆ

◆◆◆